ಪಿ.ಡಬ್ಲೂ-2

**ದಿನಾಂಕಃ 27-02-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರ ಪರ ಶ್ರೀ.ಸಿ.ಕೆ.ಪಿ ವಕೀಲರಿಂದ:**

ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ. ಸದರಿ ವಿಷಯವನ್ನು ತಿಳಿದುಕೊಂಡು ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಮೇಲೆ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲ ಸಂಗತಿಗಳು ನಿಜ ಸಂಗತಿಗಳಿರುತ್ತವೆ.

| | |
|---|---|
| 1. | ಅಂಗನ್ಯೂನ್ಯತೆ ಪ್ರಮಾಣಪತ್ರ ಹಾಜರಪಡಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು. |
| 2. | ಒಂದು ಕ್ಷ-ಕಿರಣ ಹಾಜರಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. |

**ಪಾಟೀಸವಾಲುಃ- 2 ನೇ ಎದುರುದಾರ ಪರ ಶ್ರೀಮತಿ.ಎಸ್.ಎ.ಎನ್ ವಕೀಲರಿಂದ ಃ**

1. ಅರ್ಜಿದಾರರಿಗೆ ನಾನು ಅಪಘಾತದ ನಂತರ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ಅರ್ಜಿದಾರ ನನ್ನ ಹತ್ತಿರ ಅಂಗನ್ಯೂನ್ಯತೆ ದಾಖಲೆ ಪಡೆಯಲು ಮಾತ್ರ ಬಂದಿದ್ದರು ಎಂದರೆ ಸರಿಯಲ್ಲ. ಅರ್ಜಿದಾರ ನನ್ನ ಹತ್ತಿರ ಚಿಕಿತ್ಸೆ ಪಡೆದ ಬಗ್ಗೆ ಯಾವದೇ ದಾಖಲೆ ಇಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರ ತನ್ನ ಬಲಗೈ ಗಾಯಕ್ಕೆ ಸರ್ಕಾರಿ ಆಸ್ಪತ್ರೆ ಮತ್ತು ಬಬಲೇಶ್ವರ ಆಸ್ಪತ್ರೆ ಜಮಖಂಡಿಯಲ್ಲಿ ಚಿಕಿತ್ಸೆ ಪಡೆದು ಬಲ ಮುಂಗೈ ಅಪರೇಶನ ಮಾಡಿಸಿಕೊಂಡು ನನ್ನ ಬಳಿ ಹೆಚ್ಚಿನ ಚಿಕಿತ್ಸೆಗೆ ಬಂದಿದ್ದರು. ಅರ್ಜಿದಾರರ ಮೊಣಕೈ ಎಲುಬು ಮುರಿತ ಆಗಿಲ್ಲ ಎಂದರೆ ಸರಿ, ಆದರೆ ಬಲಗೈ ರೇಡಿಯಸ್ಸ ಎಲುಬು ಮುರಿದ ಕಾರಣ ಮೋಣಕೈ ಚಲನ-ವಲನ ತೊಂದರೆ ಯಾಗುತ್ತದೆ. ಈ ವಿಚಾರ ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಮೊದಲು ಪಡೆದ ಚಿಕಿತ್ಸೆಯಿಂದ ವಾಸಿಯಾಗದ ಕಾರಣ ನನ್ನ ಬಳಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಮರ್ಪಕವಾದ ಫೀಜಿಯೋಥೇರಿಪಿ ಮಾಡಿಸಿದ್ದರೆ ಕೈ ಚಲನ-ವಲನ ಇನ್ನೂ ಚೆನ್ನಾಗಿ ಆಗುತ್ತಿತ್ತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಸಮರ್ಪಕ ಹೆಚ್ಚಿನ ಚಿಕಿತ್ಸೆ ನೀಡಿದರು ಸಹ ಅವರಿಗೆ ಆದ ಗಾಯ ಗಂಭೀರ ರೂಪ ಇರುವ ಕಾರಣ ಪೂರ್ತಿಯಾಗಿ ವಾಸಿಯಾಗಿರುವುದಿಲ್ಲ.

ಪಿ.ಡಬ್ಲೂ-2

2. ಅರ್ಜಿದಾರರ ಚಲನ-ವಲನಗಳ ಬಾಧಿತ ಮತ್ತು ಅಬಾಧಿತ ಎರಡು ಲೆಕ್ಕವನ್ನು ಸರಿಯಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ, ಬದಲಾಗಿ ಅವುಗಳ ಪ್ರತಿಶತ ನಮೂದಿಸಿದ್ದೇನೆ ಎನ್ನುತ್ತಾರೆ. ಅರ್ಜಿದಾರ ಮೇಲ್ವಿಚಾರಣೆ ಕೆಲಸಗಳನ್ನು ಮಾಡಬಹುದು ಆದರೆ ಸ್ವತಃ ದೈಹಿಕ ಕೆಲಸಗಳನ್ನು ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಅರ್ಜಿದಾರರ ಅಂಗ ಕುಂಠಿತವಾದ ಬಗ್ಗೆ ನಿಪಿ-14 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ